**ಡಿ.ಡಬ್ಲ್ಯು 4**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 19-09-2025**

**ಮುಂದುವರಿದ ಮುಖ್ಯ ವಿಚಾರಣೆಃ** 11 ನೇ ಪ್ರತಿವಾದಿ ಪರ ಶ್ರೀ ಎನ್.ಇ.ಹೆಚ್ /ಎಮ್ ಸಿ ಬಿ **ವಕೀಲರಿಂದ,**

ಈ ದಿನ ನನ್ನ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಸರ್ವೇ ನಂಬರ 680/2ಗ ರ ಪಹಣಿ ಪತ್ರಿಕೆ ಮತ್ತು ದಿನಾಂಕ 02.04.2011 ರಂದು ಮಾಡಿದ ಮೂಲ ಖಂಡಿತ ಕ್ರಯ



ದಸ್ತಾವೇಜಿನ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಡಿ-5 ಮತ್ತು 6 ಎಂದು ಗುರುತಿಸಲಾಯಿತು. ಅದೇ ರೀತಿ 11-ಇ ನಕ್ಷೆ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-7 ಎಂದು ಗುರುತಿಸಲಾಯಿತು. ಎಮ್ ಆರ್ ನಂಬರ 257 ರ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-8 ಎಂದು ಗುರುತಿಸಲಾಯಿತು. ಜಿಲ್ಲಾಧಿಕಾರಿಗಳ ಕಾರ್ಯಾಲಯವರು ನೀಡಿದ ಎನ್ ಎ ಸನದ್ ನ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-9 ಎಂದು ಗುರುತಿಸಲಾಯಿತು. ನಮೂನೆ 9 ಮತ್ತು ನಮೂನೆ 11ಎ ರ ಪ್ರತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ- 10 ಮತ್ತು ನಿಡಿ- 11 ಎಂದು ಗುರುತಿಸಲಾಯಿತು. ಗ್ರಾಮ ಪಂಚಾಯತಿಯವರು ನೀಡಿದ ಕಟ್ಟಡ ಪರವಾನಿಗೆ ಆದೇಶ ಮತ್ತು ನೀಲಿ ನಕ್ಷೆ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಈ ಹಂತದಲ್ಲಿ ವಾದಿ ಪರ ವಕೀಲರು ಪ್ರದ್ರಿ ದಾಖಲೆಗಳನ್ನು ಗುರುತಿಸಲು ತಕರಾರು ಎತ್ತಿರುವುದರಿಂದ ಪ್ರದ್ರಿ ಎರಡು ದಾಖಲೆಗಳನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ಅವುಗಳನ್ನು ಕ್ರಮವಾಗಿ ನಿಡಿ- 12 ಮತ್ತು ನಿಡಿ- 13 ಎಂದು ಗುರುತಿಸಲಾಯಿತು.

ಆದ್ದರಿಂದ ವಾದಿಯರ ದಾವೆಯನ್ನು ವಜಾ ಮಾಡಬೇಕಾಗಿ ವಿನಂತಿ.

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಜೆ.ಡಿ.ಬಿ . ವಕೀಲರಿಂದ,**

**ಶ್ರೀ ಜೆ ಡಿ ಬಿ ವಕೀಲರ ಪರವಾಗಿ ಶ್ರೀಮತಿ ಎಸ್ ಬಿ ಎನ್ ವಕೀಲರು ಪ್ರತಿವಾದಿ 1, 2, 13 ಮತ್ತು 15 ರವರ ಪರವಾಗಿ ಯಾವುದೇ ಪಾಟೀ ಸವಾಲು ಇಲ್ಲಾ ಎಂದು ನುಡಿಯುತ್ತಾರೆ.**

**ಉಳಿದ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ ಯಾವುದೇ ಪಾಟೀ ಸವಾಲು ಇಲ್ಲಾ ಎಂದು ನುಡಿಯುತ್ತಾರೆ.**

**ಈ ಹಂತದಲ್ಲಿ ವಾದಿ ಪರ ವಕೀಲರಾದ ಶ್ರೀ ಕೆ ಆರ್ ಎನ್** ವಕೀಲರು ಹಾಜರಿದ್ದು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.